ಅಧ್ಯಕ್ಷರು:- ಅವರು ಮಾತನಾಡುವಾಗ, ನೀವು ಸುಮ್ಮನೆ ಕೂರುವುದಾದರೆ ನಾನು ಸಮಯ ಕೊಡುತ್ತೇನೆ. ಅವರು ಮಾತನಾಡುವಾಗ ನೀವು ಗಲಾಟೆ ಮಾಡುವುದಾದರೆ ಇದು ಯಾವ ನ್ಯಾಯ ಹೇಳಿ. ಅವರು ಮಾತನಾಡುವಾಗ ನೀವೆಲ್ಲರೂ ಸೇರಿ ಗಲಾಟೆ ಮಾಡುತ್ತೀರಿ. ನೀವು ಮಾತನಾಡುವಾಗ ಅವರು ಸುಮ್ಮನೆ ಇರಬೇಕು. ಇದು ಯಾವ ನ್ಯಾಯ? ಶೇಕಡ 88 ಭಾಗ ಒಂದು ಕಡೆ ಇದ್ದು ಅವರು ಮಾತನಾಡಬೇಕೆಂದು ಹೇಳಿದರೆ, ಅವರಿಗೆ ಅಲೋ ಮಾಡದೆ ಇದ್ದರೆ ಇದು ಯಾವ ನ್ಯಾಯ? I cannot understand. ನೀವು ಹೇಳಿದ್ದೆಲ್ಲಾ ಅವರು ಕೇಳಬೇಕು, ಅವರು ಹೇಳುವುದನ್ನು ನೀವು ಕೇಳಕೂಡದೇ? ಪಾರ್ಲಿಮೆಂಟ್ ವಿಷಯ ಅಲ್ಲ, ಇಲ್ಲಿರುವ ಕನ್‌ಸ್ಯೂಮರ್ಸ್ ವಿಷಯ. ಆದರೆ ಕೆರೋಸಿನ್ ಪೆಟ್ರೋಲ್ ಸಿಗುವುದಿಲ್ಲವೆಂದು ಅವರು ಹೇಳುವುದು ಅಷ್ಟೆ. ನಿಮ್ಮ ಶಾಸಕರ ಹೆಸರನ್ನು ಎತ್ತುವುದಿಲ್ಲ. ನೀವು ಅವರು ಮಾತನಾಡುವುದಕ್ಕೆ ಗಲಾಟೆ ಮಾಡದೆ ಸುಮ್ಮನೆ ಕುಳಿಕುಕೊಳ್ಳುತ್ತೀರಾ ಹೇಗೆ? ತಾವು ಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುತ್ತೀರೋ ಹೇಗೆ? That I want to know. Few people cannot stall the entire House. ಅರ್ಥವಾಯಿತೇ?

ಶ್ರೀ ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಸದನದ ಸಮಯ ಬಹಳ ತೀವ್ರಗತಿಯಲ್ಲಿ ದುರುಪಯೋಗವಾಗುತ್ತಿದೆ. ದಯಮಾಡಿ ನೀವು ಇದರ ಬಗ್ಗೆ ಸೂಚನೆ ಕೊಡಬೇಕು. ಏಕೆಂದರೆ ಬಹಳ ತೀವ್ರಗತಿಯಲ್ಲಿ ದುರುಪಯೋಗವಾಗುತ್ತಿದೆ. ಸರ್ಕಾರದ ಕಾರ್ಯಕ್ರಮಗಳನ್ನು ನಡೆಸಲು ಬಿಡದೇ ಸ್ವಾರ್ಥ ರಾಜಕಾರಣ ಮಾಡತಕ್ಕಂಥ ಪ್ರಯತ್ನ ಈಗ ನಡೆಯುತ್ತಾ ಇದೆ. ದಯಮಾಡಿ ಇದರ ಬಗ್ಗೆ ತಾವು ನಿರ್ಣಯ ಕೊಡಬೇಕು.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ತಿಳುವಳಿಕೆ ಇರತಕ್ಕಂಥವರು ಮೇಲಾಗಿ ತಾವು ರೂಲಿಂಗ್ ಕೊಟ್ಟು ಇದರ ಪ್ರಕಾರ ಮಾಡಬಹುದು ಎನ್ನುವುದನ್ನು ಹೇಳಿದರೂ ಕೂಡ ನಿಮ್ಮದು ಸರಿಯಿಲ್ಲ ಎಂದು ನಿಮ್ಮ ಅಥಾರಟಿಯನ್ನೇ ಪ್ರಶ್ನೆ ಮಾಡುವುದಾದರೆ ಇವರು ವಿರೋಧ ಪಕ್ಷದ ನಾಯಕರಾಗಿ ಇರಬಹುದೇ? ವಿರೋಧ ಪಕ್ಷದ ನಾಯಕರ ಸ್ಥಾನವನ್ನು ಉಳಿಸಿಕೊಳ್ಳುತ್ತಾರೆಯೇ ಇವರು? ಇನ್ನು ನಾಳೆ ದಿವಸ ಇವರ ಕೈಗೆ ಸರ್ಕಾರ ಕೊಟ್ಟರೆ ಏನಾಗಬೇಕು ಹೇಳಿ? ಶೇಮ್ ಅಲ್ಲವೇ ಇದು? ಇವರಿಗೆ ಏನು ತೊಂದರೆಯಾಗಿದೆ ಸ್ವಾಮಿ? ಮಾನ್ಯ ವೈ.ಕೆ. ರಾಮಯ್ಯನವರು ಮಾತನಾಡಿದರೆ ಇವರಿಗೆ ಆಗುವ ತೊಂದರೆಯಾದರೂ ಏನು?

ಅಧ್ಯಕ್ಷರು:- ನಿನ್ನೆ ನೀವು ಮಾತನಾಡುವಾಗ ಅವೆಲ್ಲಾ ಸುಮ್ಮನೆ ಇದ್ದರಲ್ಲವೇ? ಎರಡೂರು ಗಂಟೆ ಮಾತನಾಡಿದಾಗ ಅವೆಲ್ಲಾ ಸುಮ್ಮೆ ಇದ್ದರು. ಆದಕಾರಣ ಶೇಕಡ 88 ಭಾಗ ಇರತಕ್ಕಂಥ ಶಾಸಕರ ಕಡೆಯಿಂದ ಅವರೇನೋ ಮಾತನಾಡಬೇಕು ಎಂದು ಕೇಳಿದ್ದಾರೆ. ಧರಣಿಯಲ್ಲಿರುವವರು ಒಪ್ಪುತ್ತೀರೋ ಅಥವಾ ಇಲ್ಲವೋ ಗೊತ್ತಿಲ್ಲ. ಇದೆ ಪ್ರಜಾಪ್ರಭುತ್ವ, ಇಲ್ಲಿ ನಮಗೆ ಮಾತನಾಡಲು ಹಕ್ಕು ಇದೆ, ನೀವುಗಳು ಎಲೆಕ್ಟ್ ಆಗಿ ಬಂದಿರುವ ಹಾಗೆ ನಾವು ಕೂಡ ಎಲೆಕ್ಟ್ ಆಗಿಯೇ ಬಂದಿದ್ದೇವೆ, ನಾವು ಮಾತನಾಡಲೇಬೇಕು ಎಂದು ಅವರು ಕೇಳುತ್ತಿದ್ದಾರೆ. ಅವರು ಮಾತನಾಡುತ್ತಾರೆ. ತಾವೆಲ್ಲರೂ ದಯವಿಟ್ಟು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ. That is all I want.

(ಧರಣಿನಿರತ ಬಿ.ಜೆ.ಪಿ. ಸದಸ್ಯರು ಯಾರೂ ಬಾವಿಯಿಂದ ನಿರ್ಗಮಿಸಲಿಲ್ಲ)